ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 374
ಸದಸ್ಯರ ಹೆಸರು : ಶ್ರೀ ಮಂಜುನಾಥ್ ಭಂಡಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : 18-02-2022.
ಉತ್ತರಿಸುವವರು : ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು.

ಕ್ರ.ಸಂ	ಪ್ರಶ್ನೆ	ಉತ್ತರ
(ಅ)	ರಾಜ್ಯದಲ್ಲಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ತೆರಿಗೆ ವ್ಯಾಪ್ತಿಗೆ ಒಳಪಡುವ ಮತ್ತು ತೆರಿಗೆ ಒಳಪಡದ ಕಟ್ಟಡಗಳು ಯಾವುವು; ಧಾರ್ಮಿಕ ಸಂಸ್ಥೆಗಳ ಹಾಗೂ ಟ್ರಸ್ಟ್‌ಗಳ ಒಡೆತನದಲ್ಲಿರುವ ಸಾಂಸ್ಕೃತಿಕ ಕೇಂದ್ರಗಳು, ವೈದ್ಯಕೀಯ ಕೇಂದ್ರಗಳು ಮತ್ತು ಶಿಕ್ಷಣ ಸಂಸ್ಥೆಗಳ ಕಟ್ಟಡಗಳು ಗ್ರಾಮ ಪಂಚಾಯತಿಯ ತೆರಿಗೆ ವಿನಾಯಿತಿಯನ್ನು ಹೊಂದಿದೆಯೇ; (ಆದೇಶದ ಪ್ರತಿಯನ್ನು ಒದಗಿಸುವುದು)	ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 199 ರಲ್ಲಿ ಗ್ರಾಮ ಪಂಚಾಯತಿಯು ಪಂಚಾಯತಿ ಪ್ರದೇಶದ ಪರಿಮಿತಿಗಳೊಳಗಿರುವ, ಕೃಷಿ ತೆರಿಗೆ ನಿರ್ಧರಣೆಗೆ ಒಳಪಟ್ಟಿರದ ಕಟ್ಟಡಗಳು ಮತ್ತು ಭೂಮಿಗಳ ಮೇಲೆ ಸ್ವತ್ತಿನ ಬಂಡವಾಳ ಮೌಲ್ಯದ ಆಧಾರದಲ್ಲಿ ಅನುಸೂಚಿ-IV ರಲ್ಲಿ ನಿರ್ದಿಷ್ಟಪಡಿಸಿರುವಂತೆ ತೆರಿಗೆಗಳನ್ನು ಅಥವಾ ಫೀಜುಗಳನ್ನು ವಿಧಿಸಬಹುದಾಗಿದೆ. ಪ್ರತಿಯನ್ನು ಅನುಬಂಧ-1 ರಲ್ಲಿ ನೀಡಿದೆ. ಕರ್ನಾಟಕ ಪಂಚಾಯತ್ ರಾಜ್ (ಗ್ರಾಮ ಪಂಚಾಯತಿಯ ತೆರಿಗೆಗಳು ಮತ್ತು ಫೀಜುಗಳು) ನಿಯಮಗಳು, 1994 ರ ಉಪ ನಿಯಮ, 6 ರಲ್ಲಿ ಸಂಪೂರ್ಣವಾಗಿ ಧರ್ಮಾರ್ಥ ಅಥವಾ ಸಾರ್ವಜನಿಕರ ಧಾರ್ಮಿಕ ಉದ್ದೇಶಗಳಿಗಾಗಿ ಮಾತ್ರವೇ ಉಪಯೋಗಿಸಿದ ಅಥವಾ ಉಪಯೋಗಿಸಲು ಉದ್ದೇಶಿಸಿರದ ಕಟ್ಟಡಗಳು ಮತ್ತು ಭೂಮಿಗಳ ಮೇಲೆ ತೆರಿಗೆ ವಿಧಿಸುವುದರಿಂದ ವಿನಾಯಿತಿ ನೀಡಲಾಗಿದೆ. ಪ್ರತಿಯನ್ನು ಅನುಬಂಧ-2 ರಲ್ಲಿ ನೀಡಿದೆ.
(ಆ)	ರಾಜ್ಯದಲ್ಲಿ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಕೃಷಿ ಉದ್ದೇಶದ ವ್ಯಾಪ್ತಿಗೆ ಒಳಪಡುವ ಕೋಳಿ ಫಾರಂ ಕಟ್ಟಡವನ್ನು ನಿರ್ಮಿಸಲು ಭೂ ಪರಿವರ್ತನೆಯನ್ನು ಕಡ್ಡಾಯಗೊಳಿಸಲಾಗಿದೆಯೇ; ಇವುಗಳಿಗೆ ಪರವಾನಗೆಯನ್ನು ನೀಡುವ ಪ್ರಾಧಿಕಾರ ಯಾವುದು; ಕೃಷಿ ಭೂಮಿಯಲ್ಲಿ ಕಟ್ಟಲಾದ ಕಟ್ಟಡಗಳಿಗೆ ಕಟ್ಟಡ ಸಂಖ್ಯೆಯನ್ನು ನೀಡಲು ಗ್ರಾಮ ಪಂಚಾಯಿತಿಗಳು ಅನುಸರಿಸಬೇಕಾದ ಕ್ರಮಗಳು ಯಾವುವು;	ಕರ್ನಾಟಕ ಭೂ ಸುಧಾರಣಾ ಕಾಯ್ದೆ 1961 ರ ಪ್ರಕರಣ 2(ಎ)(ಡಿ) ರಡಿ ಕೋಳಿ ಫಾರಂಗಳು (ಕೋಳಿ ಸಾಕಾಣಿಕೆ) ಕೃಷಿ ಕಸುಬಾಗಿ ಪರಿಗಣಿಸಲಾಗಿದೆ. ರಾಜ್ಯದಲ್ಲಿ ಗ್ರಾಮ ಪಂಚಾಯತಿಯ ವ್ಯಾಪ್ತಿಯಲ್ಲಿ ಕೃಷಿ ಉದ್ದೇಶದ ವ್ಯಾಪ್ತಿಗೆ ಒಳಪಡುವ ಕೋಳಿ ಫಾರಂ ಕಟ್ಟಡವನ್ನು ನಿರ್ಮಿಸಲು ಭೂ ಪರಿವರ್ತನೆ ಅಗತ್ಯವಿರುವುದಿಲ್ಲ, ಆದರೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಯಾವುದೇ ವಿಧವಾದ ಕಟ್ಟಡವನ್ನು ನಿರ್ಮಿಸಲು ಗ್ರಾಮ ಪಂಚಾಯತಿಯಿಂದ ಅನುಮತಿಯನ್ನು ಪಡೆಯಬೇಕಾಗಿರುತ್ತದೆ. ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಹಾಗೂ ಪಶುಸಂಗೋಪನೆ ಇಲಾಖೆಯು ವಿಧಿಸುವ ಷರತ್ತುಗಳನ್ನು ಪಾಲಿಸುವ ನಿಬಂಧನೆಗೊಳಪಟ್ಟು ಗ್ರಾಮ ಪಂಚಾಯತಿಯು ಪರವಾನಿಗೆ ನೀಡಲು ಸಕ್ಷಮ ಪ್ರಾಧಿಕಾರವಾಗಿರುತ್ತದೆ.

		ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿನ ಕ್ರಮಬದ್ಧ ಆಸ್ತಿಗಳು ಮತ್ತು ಕ್ರಮಬದ್ಧವಲ್ಲದ ಆಸ್ತಿಗಳಿಗೆ ಆಸ್ತಿಯ ಮಾಲೀಕರು ಸಂಬಂಧಿಸಿದ ದಾಖಲೆಗಳೊಂದಿಗೆ ಇ-ಸ್ವತ್ತು ತಂತ್ರಾಂಶದ ಮೂಲಕ ನಮೂನೆ-9 / 11ಎ ಅಥವಾ 11ಬಿ ನೀಡಲು ಗ್ರಾಮ ಪಂಚಾಯತಿಗಳಿಗೆ ಅರ್ಜಿ ಸಲ್ಲಿಸಿದ್ದಲ್ಲಿ ನಿಯಮಾನುಸಾರ ಪಂಚಾಯತಿ ಅಭಿವೃದ್ಧಿ ಅಧಿಕಾರಿಯು ಡಿಜಿಟಲ್ ಸಹಿಯ ಮೂಲಕ ಆಸ್ತಿ ಗುರುತಿನ ಸಂಖ್ಯೆಯೊಂದಿಗೆ ನಮೂನೆಗಳನ್ನು ವಿತರಿಸಲು ಕ್ರಮ ವಹಿಸುವರು.
(ಇ)	ರಾಜ್ಯದಲ್ಲಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮೊಬೈಲ್ ಟವರ್ ನಿರ್ಮಾಣಕ್ಕೆ ಅನುಸರಿಸಬೇಕಾದ ಮಾರ್ಗಸೂಚಿಗಳು ಯಾವುವು; ಗ್ರಾಮ ಪಂಚಾಯಿತಿಗಳು ಈ ಟವರ್ ನಿರ್ಮಾಣಕ್ಕೆ ವಿಧಿಸಬೇಕಾದ ಪರವಾನಗೆ ಶುಲ್ಕವೆಷ್ಟು; ಮೊಬೈಲ್ ಟವರ್‌ಗಳಿಗೆ ವಿಧಿಸಬೇಕಾದ ವಾರ್ಷಿಕ ವ್ಯಾಪಾರ ಶುಲ್ಕವೆಷ್ಟು?	ರಾಜ್ಯದಲ್ಲಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಮೊಬೈಲ್ ಟವರ್ ನಿರ್ಮಾಣಕ್ಕೆ ಅನುಸರಿಸಬೇಕಾದ ಮಾರ್ಗಸೂಚಿಗಳು, ಗ್ರಾಮ ಪಂಚಾಯಿತಿಗಳು ಈ ಟವರ್ ನಿರ್ಮಾಣಕ್ಕೆ ವಿಧಿಸಬೇಕಾದ ಪರವಾನಗೆ ಶುಲ್ಕ ಮತ್ತು ಮೊಬೈಲ್ ಟವರ್‌ಗಳಿಗೆ ವಿಧಿಸಬೇಕಾದ ವಾರ್ಷಿಕ ತೆರಿಗೆ ಬಗ್ಗೆ ಸರ್ಕಾರದ ಅಧಿಸೂಚನೆ ಸಂಖ್ಯೆ: ಗ್ರಾಅಪ 136 ಗ್ರಾಪಂಅ 2021, ದಿನಾಂಕ: 02-12-2021 ರಲ್ಲಿ Karnataka Gram Swaraj and Panchayat Raj (Gram Panchayat) (Telecommunication Infrastructure Tower and Overground Cable or Underground Optical Fibre Cable Infrastructure) Bye-Laws, 2021ಅನ್ನು ರೂಪಿಸಲಾಗಿದೆ. ವಾರ್ಷಿಕವಾಗಿ ಪ್ರತಿ ಮೊಬೈಲ್ ಟವರ್‌ನ ಮೇಲೆ ರೂ. 12,000/- ಗಳ ತೆರಿಗೆಯನ್ನು ವಿಧಿಸಲಾಗುತ್ತಿದೆ.

ಸಂ. ಗ್ರಾಅಪ 33 ಗ್ರಾಪಂಅ 2022

(ಕೆ.ಎಸ್. ಈಶ್ವರಪ್ಪ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಸಚಿವರು.

ಕೆ.ಎಸ್. ಈಶ್ವರಪ್ಪ
ಗ್ರಾಮೀಣಾಭಿವೃದ್ಧಿ ಮತ್ತು
ಪಂಚಾಯತ್ ರಾಜ್ ಸಚಿವರು

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 374 ಕ್ಕೆ ಅನುಬಂಧ

(vi) ಎಲ್ಲಾ ದತ್ತಾಂಶ ಜನರಿಗೆ ಲಭ್ಯವಾಗುವಂತೆ ಮಾಡುವುದು.]

---

[1][ಅನುಸೂಚಿ–IV
(199ನೇ ಪ್ರಕರಣವನ್ನು ನೋಡಿ)

	ಸ್ವತ್ತಿನ ಮೇಲೆ ತೆರಿಗೆ	ಕಟ್ಟಡದ ಮೇಲೆ ತೆರಿಗೆ
ಎ	ಕಟ್ಟಡಗಳ ಮೇಲೆ ತೆರಿಗೆ	ವಾರ್ಷಿಕ ದರ
	(i) ನಿವಾಸ ಕಟ್ಟಡಗಳು	ಸ್ವತ್ತಿನ ಮೂಲಮೌಲ್ಯದ ಮೇಲೆ 0.0[illegible] ಕಡಿಮೆಯಿಲ್ಲದ ಆದರೆ 0.10%ಕ್ಕಿಂತ [illegible]
	(ii) ವಾಣಿಜ್ಯ ಕಟ್ಟಡಗಳು	ಸ್ವತ್ತಿನ ಮೂಲಮೌಲ್ಯದ ಮೇಲೆ 0.20% [illegible] ಕಡಿಮೆಯಿಲ್ಲದ ಆದರೆ 0.5%ಕ್ಕಿಂತ [illegible]
	(iii) [2][(ಎ) ಅತಿಸಣ್ಣ ಕೈಗಾರಿಕೆ (ಬಿ) ಮಧ್ಯಮ ಕೈಗಾರಿಕೆ (ಸಿ) ಬೃಹತ್ ಕೈಗಾರಿಕೆ ಸ್ವತ್ತಿನ ಪ್ರಧಾನ ಮೌಲ್ಯದ ಮೇಲೆ	ಶೇ. 0.40 ಶೇ. 0.50 ಶೇ. 0.60]
ಬಿ	ಈ ಮುಂದಿನ ಅಳತೆಯುಳ್ಳ ಖಾಲಿ ಜಮೀನು, ಎಂದರೆ:–	
	(ಎ) 1000 ಚ.ಮೀ. ಗಿಂತ ಹೆಚ್ಚಿಲ್ಲದ	ಸ್ವತ್ತಿನ ಮೂಲಮೌಲ್ಯದ ಮೇಲೆ 0.05% [illegible] ಕಡಿಮೆಯಿಲ್ಲದ ಆದರೆ 0.1%ಕ್ಕಿಂತ ಹೆಚ್ಚಿಲ್ಲದ
	(ಬಿ) 1000 ಚ.ಮೀ. ಗಿಂತ ಹೆಚ್ಚಿನ ಆದರೆ 4000 ಚ.ಮೀ.ಗಿಂತ ಕಡಿಮೆ	ಸ್ವತ್ತಿನ ಮೂಲಮೌಲ್ಯದ ಮೇಲೆ 0.025% [illegible] ಕಡಿಮೆಯಿಲ್ಲದ ಆದರೆ 0.05%ಕ್ಕಿಂತ ಹೆಚ್ಚಿಲ್ಲದ
	(ಸಿ) 4000 ಚ.ಮೀ. ಗಿಂತ ಹೆಚ್ಚು	ಸ್ವತ್ತಿನ ಮೂಲಮೌಲ್ಯದ ಮೇಲೆ 0.01% [illegible] ಕಡಿಮೆಯಿಲ್ಲದ ಆದರೆ 0.02%ಕ್ಕಿಂತ ಹೆಚ್ಚಿಲ್ಲದ
[3][4][ಸಿ	(I) ವಿಮಾನ ನಿಲ್ದಾಣದ ರನ್‌ವೇ ಪ್ರದೇಶ (ಬಿ) ವಿಮಾನ ನಿಲ್ದಾಣ ಅಥವಾ ಕೈಗಾರಿಕಾ ಪ್ರದೇಶದ ಖಾಲಿ ಜಮೀನುಗಳಲ್ಲಿ ನೆಡುತೋಪುಗಳನ್ನು ಬೆಳೆಸಿರುವ ಪ್ರದೇಶಗಳು	ಸ್ವತ್ತಿನ ಪ್ರಧಾನ ಮೌಲ್ಯದ ಮೇಲೆ ಶೇ. 0.10 ತೆರಿಗೆ ಇಲ್ಲ]

---

1. 2015ರ ಅಧಿನಿಯಮ ಸಂಖ್ಯೆ 44ರ ಅನ್ವಯ ದಿನಾಂಕ 25–2–2016ರಿಂದ ಜಾರಿಗೆ ಬರುವಂತೆ ಅನುಸೂಚಿ IVರ [illegible] ಪ್ರತಿಯೋಜಿಸಲಾಗಿದೆ
2. 2020ರ ಕರ್ನಾಟಕ ಅಧಿನಿಯಮ ಸಂಖ್ಯೆ 49ರ ಅನ್ವಯ ಪ್ರತಿಯೋಜಿಸಲಾಗಿದೆ ಮತ್ತು ಇದು ದಿನಾಂಕ 31–3–20[illegible]

[illegible] ಮೇಲೆ ತೆರಿಗೆ	ವಾರ್ಷಿಕ ಪ್ರತಿ ಟವರಿನ ಮೇಲೆ ಹನ್ನೆರಡು ಸಾವಿರ ರೂಪಾಯಿಗಳು
[illegible] ಮೇಲೆ ತೆರಿಗೆ	ಟರ್ಬೈನ್‌ಗಳನ್ನು ಆಧರಿಸಿ ವಾರ್ಷಿಕ 0.5ರಿಂದ 1 ಲಕ್ಷ
[illegible] ಗಳ ತೆರಿಗೆ	ಸ್ವತ್ತಿನ ಮೂಲಮೌಲ್ಯದ ಮೇಲೆ 0.50% ಕ್ಕಿಂತ ಕಡಿಮೆಯಿಲ್ಲದ ಆದರೆ 1.50%ಕ್ಕಿಂತ ಹೆಚ್ಚಲ್ಲದೆ

[illegible] 1 [illegible] ಗೆ ಗುರಿಯಾಗುವ ಸ್ವತ್ತಿನ ಮೂಲಮೌಲ್ಯ ಎಂದರೆ (ಕರ್ನಾಟಕ ಸ್ಟ್ಯಾಂಪ್ ಅಧಿನಿಯಮ, [illegible] ದ ಅಡಿಯಲ್ಲಿ ಪ್ರಕಟಿಸಲಾದ ಮಾರ್ಗಸೂಚಿ ಮಾರುಕಟ್ಟೆ ಮೌಲ್ಯದಲ್ಲಿ ಸರ್ಕಾರವು [illegible] ಬಹುದಾದಂತೆ ನಿರ್ಧರಣೆಯ ಸಮಯದ ಮೌಲ್ಯದ ಸವಕಳಿಯನ್ನು ಕಳೆಯುವುದು)

[illegible] ಜಮೀನು ಅಥವಾ ಅವೆರಡರ ಮೇಲೆ ಪ್ರದೇಶವನ್ನು, ಕಟ್ಟಡದ ನಿರ್ಮಾಣದ ವಿಧಾನ, [illegible] ಮತ್ತು ಕಟ್ಟಡದ ಆಯಸು ಮತ್ತು ನಿಯಮಿಸಬಹುದಾದ ಅಂತಹ ಇತರ ಯಾವುದೇ [illegible] ಗಮನದಲ್ಲಿಟ್ಟುಕೊಂಡು ನಿಯಮಗಳು ಮತ್ತು ದರಗಳನ್ನು ಅನುಸೂಚಿಯಲ್ಲಿ [illegible] ಗೆಯ ನಿರ್ಧರಣೆ.

[illegible] ಜನೆಗಳ ಮೇಲೆ ಶುಲ್ಕ	ಪ್ರತಿ ಪ್ರದರ್ಶನಕ್ಕೆ ಐವತ್ತು ರೂಪಾಯಿಗಳು
[illegible] ನಿಲುಗಡೆ ಶುಲ್ಕ	ಪ್ರತಿ ದಿನಕ್ಕೆ ರೂಪಾಯಿಗಳಲ್ಲಿ
(i) ಬಸ್, ಲಾರಿ ಮುಂತಾದವುಗಳು	50/–
(ii) ಕಾರ್ ಮತ್ತು ಲಘು ಮೋಟಾರು ವಾಹನಗಳು	20/–
(iii) ಮೋಟಾರು ಸೈಕಲ್	10/–
(iv) ಸ್ಪ್ರಿಂಗ್ ಉಳ್ಳ ಇತರ ವಾಹನ	3/–
(v) ಸ್ಪ್ರಿಂಗ್ ಇಲ್ಲದಿರುವ ಪ್ರತಿಯೊಂದು ಗಾಡಿ ಮತ್ತು ಇತರ ವಾಹನ	2/–
(vi) ಪ್ರತಿಯೊಂದು ಬೈಸೈಕಲ್ ಮತ್ತು ತ್ರಿಚಕ್ರವಾಹನ	1/–
ಮಾರುಕಟ್ಟೆಗಳ ಮೇಲೆ ಶುಲ್ಕ	
(i) ಒಂದು ಚದುರ ಮೀಟರ್‌ಗಿಂದ ಹೆಚ್ಚಲ್ಲದ ಪ್ರತಿಯೊಂದು ಪ್ಲಾಟಿನ ಮೇಲೆ	ಪ್ರತಿ ದಿನಕ್ಕೆ ಐದು ರೂಪಾಯಿ
(ii) ಪ್ರತಿ ಹೆಚ್ಚಿನ ಚದುರ ಮೀಟರ್ ಅಳತೆಯುಳ್ಳ ಪ್ಲಾಟ್ ಅಥವಾ ಅದರ ಭಾಗಕ್ಕೆ	ಪ್ರತಿ ದಿನಕ್ಕೆ ಎರಡು ರೂಪಾಯಿ
(iii) ಯಾವುದೇ ಸರಕಿನ ಪ್ರತಿ ಬಾಸ್ಕೆಟ್ ಅಥವಾ ಬ್ಯಾಗಿನ ಮೇಲೆ	ಪ್ರತಿ ದಿನಕ್ಕೆ ಎರಡು ರೂಪಾಯಿ

	(iv) ಯಾವುದೇ ಸರಕಿನ ಬ್ಯಾಗನ್ನು ಹೇರುವ ಪ್ರತಿ ಗಾಡಿಯ ಮೇಲೆ	ಪ್ರತಿ ದಿನಕ್ಕೆ ಐದು ರೂಪಾಯಿ
ಜೆ	ಪಶುಗಳ ನೋಂದಣಿಯ ಮೇಲೆ ಶುಲ್ಕ	
	ಸಂತೆಗಳು ಮತ್ತು ಜಾತ್ರೆಗಳಲ್ಲಿ ಮಾರಾಟಕ್ಕಾಗಿ ತಂದ ಪ್ರತಿ ಪಶುವಿನ ಮೇಲೆ	ಪ್ರತಿ ದಿನಕ್ಕೆ ಐದು ರೂಪಾಯಿ
	ಮೇಯಿಸುವ ಜಮೀನಿನಲ್ಲಿ ಪಶುಗಳನ್ನು ಮೇಯಿಸುವುದಕ್ಕೆ ಶುಲ್ಕ	ಪ್ರತಿ ತಿಂಗಳಿಗೆ ಐದು ರೂಪಾಯಿ
	ಆಪ್ಟಿಕಲ್ ಫೈಬರ್ಸ್ ಕೇಬಲ್‌ಗಳನ್ನು ಹಾಕುವುದಕ್ಕಾಗಿ ರಸ್ತೆಗಳನ್ನು ತೋಡುವುದಕ್ಕಾಗಿ ಶುಲ್ಕ	ಮೂರು ನಾಳಗಳಿಗೆ ಪ್ರತಿ ಮೀಟರ್‌ಗೆ 450 ರೂಪಾಯಿಗಳು ಲೇಯಿಂಗ್ ಚಾರ್ಜ್
		ಹೆಚ್ಚಿನ ನಾಳಗಳಿಗೆ ಪ್ರತಿ ಮೀಟರ್‌ಗೆ 75 ರೂಪಾಯಿ
		ಮೇಲ್ವಿಚಾರಣೆ ಚಾರ್ಜ್ ಪ್ರತಿ ಮೀಟರ್‌ಗೆ 75 ರೂಪಾಯಿ
		ಹಿಂದಿರುಗಿಸಬಹುದಾದ ಭದ್ರತಾ ಠೇವಣಿ ಪ್ರತಿ ಮೀಟರ್ ಗೆ 119.50 ರೂಪಾಯಿಯಂತೆ.]

ವಿಧಾನ ಪರಿಷತ್ತಿನ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ :- 374 ಕ್ಕೆ ಅನುಬಂಧ - 2

ಅಧ್ಯಾಯ III

ಕಟ್ಟಡಗಳು ಮತ್ತು ಭೂಮಿಗಳ ಮೇಲೆ ತೆರಿಗೆ

5. ತೆರಿಗೆಯ ದರ.–(ಕ) ಪ್ರತಿ ವರ್ಷಕ್ಕೆ ಕಟ್ಟಡಗಳ ಮೇಲೆ ಅಂಥ ಕಟ್ಟಡಗಳ ವಾರ್ಷಿಕ ಬಾಡಿಗೆ ಮೌಲ್ಯ ಶೇಕಡಾ ಹತ್ತರ ದರದಲ್ಲಿ ಮತ್ತು

(ಖ) ಭೂಮಿಯ ಮೇಲೆ ಪ್ರತಿ ಒಂದು ನೂರು ಚದರ ಮೀಟರ್‌ಗೆ ಪ್ರತಿವರ್ಷಕ್ಕೆ ಒಂದು ರೂಪಾಯಿ ದರದಲ್ಲಿ ತೆರಿಗೆಯನ್ನು ವಿಧಿಸತಕ್ಕದ್ದು.

6. ವಿನಾಯಿತಿ.–199ನೇ ಪ್ರಕರಣದ (1)ನೇ ಉಪ-ಪ್ರಕರಣದ ಅಡಿಯಲ್ಲಿ ತೆರಿಗೆಯನ್ನು ವಿಧಿಸುವುದರಿಂದ ಈ ಕೆಳಕಂಡ ಕಟ್ಟಡಗಳು ಮತ್ತು ಭೂಮಿಗಳಿಗೆ ವಿನಾಯಿತಿ ಕೊಡತಕ್ಕದ್ದು, ಎಂದರೆ.–

(ಕ) ಜಿಲ್ಲಾ ಪಂಚಾಯತ್, ತಾಲ್ಲೂಕು ಪಂಚಾಯತ್ ಮತ್ತು ಗ್ರಾಮ ಪಂಚಾಯತ್‌ಗಳಿಗೆ ಸೇರಿದ ಕಟ್ಟಡಗಳು ಮತ್ತು ಭೂಮಿ;

(ಖ) ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರಕ್ಕೆ ಸೇರಿದ ಮತ್ತು ಅಂಥ ಸರ್ಕಾರದ ಉದ್ದೇಶಗಳಿಗಾಗಿ ಉಪಯೋಗಿಸಿದ ಮತ್ತು ವಾಸ ಅಥವಾ ವಾಣಿಜ್ಯ ಉದ್ದೇಶಗಳಿಗಾಗಿ ಉಪಯೋಗಿಸಿದ ಅಥವಾ ಉಪಯೋಗಿಸಲು ಉದ್ದೇಶಿಸಿರದ ಕಟ್ಟಡಗಳು ಮತ್ತು ಭೂಮಿಗಳು;

(ಗ) ಸಂಪೂರ್ಣವಾಗಿ ಧರ್ಮಾರ್ಥ ಅಥವಾ ಸಾರ್ವಜನಿಕರ ಧಾರ್ಮಿಕ ಉದ್ದೇಶಗಳಿಗಾಗಿ ಮಾತ್ರವೇ ಉಪಯೋಗಿಸಿದ ಮತ್ತು ಬಾಡಿಗೆಗೆ ಕೊಟ್ಟಿರದ ಕಟ್ಟಡ ಮತ್ತು ಭೂಮಿಗಳು; ಮತ್ತು

(ಘ) ಒಂದು ನೂರು ಚದರ ಮೀಟರ್‌ಗಿಂತ ಕಡಿಮೆ ಅಳತೆಯ ಭೂಮಿಗಳು ಮತ್ತು ವಾರ್ಷಿಕ ಬಾಡಿಗೆ ಮೌಲ್ಯವು ಇಪ್ಪತ್ತೈದು ರೂಪಾಯಿಗಳಿಗಿಂತ ಕಡಿಮೆ ಇರುವ ಕಟ್ಟಡಗಳು.

7. ನಿರ್ಧರಣಾ ಪಟ್ಟಿ.–ಕಾರ್ಯದರ್ಶಿಯು 3ನೇ ನಿಯಮದ ಅಡಿಯಲ್ಲಿನ ನಿರ್ಣಯದ ನೋಟೀಸಿನ ಪ್ರಕಟಣೆಯ ತರುವಾಯ ಆದಷ್ಟು ಬೇಗ ಆದರೆ ನಿಕಟೋತ್ತರ ಡಿಸೆಂಬರ್ ತಿಂಗಳ ಒಂದನೇ ದಿನಾಂಕ ಮೀರದಂತೆ ಪಂಚಾಯತ್ ಪ್ರದೇಶದ ಕಟ್ಟಡಗಳು ಹಾಗೂ ಭೂಮಿಗಳಿಗೆ ಸಂಬಂಧಿಸಿದ ನಿರ್ಧರಣಾ ಪಟ್ಟಿಯನ್ನು.–

(ಕ) ಪ್ರತಿಯೊಂದು ಮನೆ ಅಥವಾ ಭೂಮಿಯ ಕ್ರಮಸಂಖ್ಯೆ;

(ಖ) ಒಡೆಯ ಮತ್ತು ಅಧಿಭೋಗದಾರನು ಯಾರಾದರೂ ಇದ್ದರೆ ಅವನ ಹೆಸರು;

(ಗ) ಕಟ್ಟಡಗಳ ವಾರ್ಷಿಕ ಬಾಡಿಗೆ ಮೌಲ್ಯ; ಮತ್ತು

(ಘ) ಅದರ ಮೇಲೆ ತೆರಿಗೆ ನಿರ್ಧರಿಸಿದ ಮೊಬಲಗು,

ಇವುಗಳನ್ನು ತೋರಿಸಿ ನಿರ್ಧರಣಾ ಪಟ್ಟಿಯನ್ನು ತಯಾರಿಸತಕ್ಕದ್ದು.

8. ನಿರ್ಧರಣಾ ಪಟ್ಟಿಯ ಬಗ್ಗೆ ಆಕ್ಷೇಪಣೆಯನ್ನು ಹೇಗೆ ವ್ಯವಹರಿಸತಕ್ಕದ್ದು.–ನಿರ್ಧರಣಾ ಪಟ್ಟಿಯು ಪೂರ್ಣಗೊಂಡಾಗ ನೋಟೀಸನ್ನು ಗ್ರಾಮ ಪಂಚಾಯಿತಿ ಕಛೇರಿಯಲ್ಲಿ ಆ ಪಟ್ಟಿಯನ್ನು ಪರಿಶೀಲನೆಗಾಗಿ ಇಡಲಾಗಿದೆ ಎಂದು ಮತ್ತು ಹಿಂದೆ ಹೇಳಿದ ನೋಟೀಸಿನ ಪ್ರಕಟಣೆಯ ದಿನಾಂಕದಿಂದ ಮೂವತ್ತು ದಿವಸಗಳಿಗೆ ಮುಂಚಿನದಲ್ಲದಂಥ ದಿನಾಂಕದಂದು ಗ್ರಾಮ ಪಂಚಾಯಿತಿಯು ಪರ್ಯಾಲೋಚಿಸುವುದೆಂದು ಮತ್ತು ತೀರ್ಮಾನಿಸುವುದು ಎಂದು ನಿರೂಪಿಸಿ ಗ್ರಾಮ ಪಂಚಾಯಿತಿ ಕಛೇರಿಯ ನೋಟೀಸ್ ಬೋರ್ಡಿನ ಮೇಲೆ ಅದನ್ನು ಅಂಟಿಸುವ ಮೂಲಕ ಮತ್ತು ಪಂಚಾಯತ್ ಪ್ರದೇಶದೊಳಗೆ ಡಂಗುರ ಹೊಡೆಸಿ ಸಾರುವ ಮೂಲಕವೂ ಸಹ ಪ್ರಕಟಿಸತಕ್ಕದ್ದು.